ಮಾವಂದಿರ, ಅಜ್ಜಿ ತಾತನ ವಿರೋಧದ ನಡುವೆಯೂ ಮದುವೆ ಮಾಡಿ, ಈ ವಿಚಾರದಲ್ಲಿ ನಾನೇ ಗೆದ್ದೆ ಎಂದುಕೊಂಡು ಮೀಸೆ ಮರೆಯಲ್ಲಿ ನಕ್ಕಿದ್ದ.

ಮದುವೆಯಾದ ಹೊಸತರಲ್ಲಿ ಮಾತು ಮಾತಿಗೂ ಸಿಡಿಮಿಡಿಗೊಂಡು ಸಿಟ್ಟಾಗುತ್ತಿದ್ದ ರೂಪಾ, ಸಣ್ಣ ಪುಟ್ಟ ವಿಚಾರಕ್ಕೆಲ್ಲ ರಾಣಾರಂಪ ಮಾಡುತ್ತಿದ್ದಳು. 'ಓದುವ ಹಂಬಲದಲ್ಲಿದ್ದ ಮಗಳಿಗೆ ಮದುವೆ ಮಾಡಿದ್ದರಿಂದ ಈ ರೀತಿ ಮಾಡ್ತಿದಾಳೆ. ಕಾಪರ ಹಳೆತರಕ್ಕೆ ಬಿದ್ರೆ ಎಲ್ಲಾ ಸರಿ ಹೋಗುತ್ತೆ. ಅಲ್ಲಿ ತನಕ ನೀವೇ ಸುಧಾರಿಸಿಕೊಂಡು ಹೋಗಬೇಕು' ಎಂದು ಗಂಡಿನ ಕಡೆಯವರಿಗೆ ಉಗ್ರಪ್ಪ ಸವಿಯಾದ ಅಪದ್ದ ಹೇಳಿದ್ದ. ಆದರೆ ವಾಸಿಯಾಗದ ರೋಗದ ಹಾಗೆ ದಿನೇ ದಿನೇ ಉಲ್ಬಣಿಸಿದ ಅವಳ ಅಸಂಬದ್ಧ ಮಾತು, ಅಸಹಜ ವರ್ತನೆಯನ್ನು ನೋಡಿದಾಗ ಗಂಡಿನ ಕಡೆಯವರ ಲೆಕ್ಕಾಚಾರವೆಲ್ಲಾ ತಲೆಕೆಳಗಾಗಿತ್ತು. ಮೊದಲೆಲ್ಲಾ ಜೋರಾಗಿ ಬಾಯಿ ಮಾಡುತ್ತಲೇ ತನ್ನ ಅಸಹಾಯಕತೆಗೆ ತನ್ನನ್ನೇ ನಿಂದಿಸಿಕೊಳ್ಳುತ್ತಾ ಹೊಟ್ಟೆತುಂಬಾ ಉಣ್ಣುತ್ತಿದ್ದಳು. ಆದರೆ ದಿನಗಳು ಉರುಳಿದಂತೆಲ್ಲಾ ಬತ್ತಿ ಹೋದ ನದಿಯಂತೆ ಮಂಕಾಗಿರುವ ಸೊಸೆಯ ಏಕಾಂತದ ವಿಚಿತ್ರ ವರ್ತನೆಗಳು ಅತ್ತೆ ಮಾವನಲ್ಲಿ ದಿಗಿಲುಂಟು ಮಾಡಿತ್ತು. ಏನಾದರೂ ಹೆಚ್ಚು ಕಡಿಮೆಯಾದರೆ ನಮ್ಮ ಮೇಲೆ ಇಲ್ಲದ ಸಲ್ಲದ ಅಪವಾದ ಹೊರಿಸಲು ತುದಿಗಾಲಲ್ಲಿ ನಿಂತಿದ್ದ ನೆರೆಹೊರೆಯವರ ಹರಿತವಾದ ನಾಲಿಗೆಗಳಿಗೆ ಹೆದರಿಕೊಂಡ ಅವರು ಸೊಸೆಯನ್ನು ತವರು ಮನೆಗೆ ಬಿಟ್ಟು ಹೋಗಿದ್ದರು. ಹೆಂಡತಿಯ ವರ್ತನೆಯ ಬಗ್ಗೆ ತಾನು ನಿರ್ಲಿಪ್ತವಾಗಿದ್ದರೆ ಜನ ತಪ್ಪು ತಿಳಿಯುತ್ತಾರೆಂದುಕೊಂಡ ಗಂಡ ಎಡುಪು-ದಡುಪು ಬಂದು ಮಾತನಾಡಿಸಿಕೊಂಡು ಹೋಗುತ್ತಿದ್ದ.

'ನಿನ್ನ ಮಗಳಿಗೆ ತುಪ್ಪದಾಗೆ ಗೋಳ್ಳಿ ತುಪ್ಪದಾಗೆ ಅದ್ದಿ ತಿನಿಸಿದ್ರು ತಪ್ಪು ನಂದೇ ಅಮ್ತಾರೆ. ಯಾರು ಏನಾದ್ರು ಅಂದ್ಕಮ್ಲಿ, ದುಡ್ಡಿನ ಮುಖ ನೋಡ್ದಂಗೆ ಸರಿಯಾದ ಜಾಗಕ್ಕೆ ಕರಕೊಂಡು ಹೋಗಿ ತರ್ಸಾನ' ಎಂದು ಕಲಾವತಿ ಗಂಡನಿಗೆ ಹೇಳಿದಾಗ, ಆತನಿಗೆ ದಿಕ್ಕೇ ತೋಚದಂತಾಗಿತ್ತು. 'ತಿದ್ದಿದ ಬೊಂಬೆ ತರ ಇದ್ದವಳು ನೋಡ ನೋಡುತ್ತಲೆ ಸಪ್ಪೆದಂಟು ಒಣಗಿದಂಗೆ ಒಣಗಿ ಬಿಟ್ಲು. ಇದರಲ್ಲಿ ಸರ್ಲಾರದ ಜನರ ಕೈ ತಿಟುವಾಟ ಇದ್ದಂಗಿದೆ' ಅಂತ ಸರೀಕರು ಹೇಳಿದ್ದು ಕೇಳಿ ದೇವರು, ದಿಂಡ್ರು, ಮಾಟ-ಮಂತ್ರ ಅಂತೇಳಿ ಸುತ್ತ ಕೈವಾರ ತಿರುಗಿ ಬಂದ್ರು ಎಳ್ಳು ಕಾಳಿನೋಟು ಗುಣವಾಗಿರಲಿಲ್ಲ.

'ಈ ಕಾಲದಲ್ಲೂ ಅಂತ್ರ-ಮಂತ್ರ ಅಂತೇಳಿ ಓಡಾಡ್ತಿರಲ್ರಲೆ, ಮೊದ್ಲು ಆಸ್ಪತ್ರೆಗೆ ಕರಕೊಂಡು ಹೋಗ್ರಿ' ಅಂತೇಳಿ ಉಗ್ರಪ್ಪನ ಅಣ್ಣ ಮಂಜಪ್ಪ ಮಕರಿಯ ಸಿಟ್ಟಾಗಿ ತಮ್ಮನ ಅವಿವೇಕತನಕ್ಕೆ ಬಯ್ದಿದ್ದರಿಂದ ಅದೂ ಒಂದು ನೋಡೇ ಬಿಡಾನೆಂದು ಆಸ್ಪತ್ರೆಗೆ ಕರಕೊಂಡು ಹೋಗಿದ್ದರು. ಅಲ್ಲಿ ಎಲ್ಲಾ ರೀತಿಯ ಟೆಸ್ಟ್‌ಗಳನ್ನು ಮಾಡಿದ ಡಾಕ್ಟ್ರು, 'ಈ ಹುಡುಗಿಗೆ ಯಾವ ಕಾಯಿಲೆನೂ ಇಲ್ಲ. ಬಟ್ ಶಿ ಇಸ್ ಮೆಂಟಲಿ ಡಿಸ್ಟರ್ಬ್ ಆಗಿದಾಳೆ. ಪ್ರೀತಿಯಿಂದ ನೋಡಿಕೊಂಡ್ರೆ ಸರಿ ಹೋಗ್ತಾಳೆ' ಎಂದು ಹೇಳಿ ಕಳುಹಿಸಿದ್ದರು. ನಾವು ಬಲವಂತದ ಮದುವೆ ಮಾಡಿದ್ದರಿಂದ ಇದೆಲ್ಲ ಇವಳ ಸೋಗಲಾಡಿತನವೆಂದು ಭಾವಿಸಿದ ಕಲಾವತಿ, ಗಂಡನ ಕಿವಿಯೂದಿ ಒಂದು ವಾರದ ಮಟ್ಟಿಗೆ ಮನೆಯಲ್ಲಿಟ್ಟುಕೊಂಡ ನಂತರ, ಒತ್ತಾಯ ಪೂರ್ವಕವಾಗಿ ಮತ್ತೆ ಗಂಡನ ಮನೆಗೆ ಬಿಟ್ಟು ಬಂದಿದ್ದರು.

ಒಲ್ಲದ ಮನಸ್ಸಿನಿಂದಲೇ ಗಂಡನ ಮನೆಗೆ ಹೋದ ರೂಪಾ ತಿಂಗಳೊಪ್ಪತ್ತಿನಲ್ಲೆ ವಿಷ ಕುಡಿದಿರುವಳೆಂದು ಫೋನು ಬಂದಿತ್ತು. ಆ ವಿಚಾರ ಸುಜಾತಳಿಗೂ ಗೊತ್ತಾಗಿ ತಂಗಿಯ ಯೋಗಕ್ಷೇಮ ವಿಚಾರಿಸಲು ಊರಿಗೆ ಬಂದಿದ್ದಳು. ರೂಪಾಳಿಗೆ ಟ್ರೀಟ್‌ಮೆಂಟ್ ಮಾಡಿದ ಡಾಕ್ಟ್ರು ಮೂರು ದಿನ ಅಬ್ಸರ್‌ವೇಷನ್ ಮಾಡಲು ಹೇಳಿದ್ದರು. 'ಮೂರು-ನಾಕು ದಿನದೊಳಗೆ ಪಾಯಿಸನ್ ರಿಯಾಕ್ಷನ್ ಆಗದಿದ್ರೆ, ನಿಮ್ಮ ಮಗಳು ಸಾವಿನ ದವಡೆಯಿಂದ ಪಾರಾದಂತೆ' ಎಂದು ಹೇಳಿದ್ದರಿಂದ ಆ ಮೂರು ನಾಲ್ಕು ದಿನ ಸುಜಾತಳ ಕಣ್ಣ ಕಾವಲಿನಲ್ಲಿ ಹಾಲು-ಅನ್ನ ತಿನ್ನಿಸಿಕೊಂಡು ರೂಪಾಳನ್ನು ಜೋಪಾನ ಮಾಡಿದ್ದಳು. ನಾಕನೆ ದಿನ ಮತ್ತೊಂದು ಸಲ ಚೆಕಪ್‌ಗೆಂದು ಹೋದಾಗ, ಸುಜಾತಳನ್ನು ತನ್ನ ಛೇಂಬರಿಗೆ ಕರೆಸಿಕೊಂಡ ಡಾಕ್ಟ್ರು, 'ಪೇಷೆಂಟ್‌ಗೆ ನೀವು ಏನಾಗಬೇಕು?' ಆಪ್ತವಾಗಿ ಮಾತಿಗೆಳೆದರು. 'ನಾನು ಅವಳ ದೊಡ್ಡಪ್ಪನ ಮಗಳು, ಅಕ್ಕ ಆಗಬೇಕು. ಏನ್ ಸಮಾಚಾರ ಸರ್' ಸುಜಾತ ಸ್ವಲ್ಪ ಆತಂಕದಿಂದ ಕೇಳಿದಳು.

'ನೋಡಮ್ಮ ಈಗ ನೀವು ಆತಂಕ ಪಡುವ ಅಗತ್ಯವಿಲ್ಲ. ಆದರೆ ವಿಷ ಕುಡಿದಿರುವಳೆಂದು ಆಸ್ಪತ್ರೆಗೆ ಕರಕೊಂಡು